

ಹೊಂದಿರುವ ಕೋಲ್ಕತ್ತದ ಮೋಹನ್ ಬಾಗನ್ (ಐಎಸ್‌ಎಲ್‌ನಲ್ಲಿ ಮೋಹನ್ ಬಾಗನ್ ಸೂಪರ್ ಜೈಂಟ್ಸ್), ಜೆಮ್‌ಷೆಡ್‌ಪುರ, ಮುಂಬೈ ಸಿಟಿ, ಗೋವಾ, ಈಸ್ಟ್ ಬೆಂಗಾಲ್, ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ), ನಾರ್ಥ್ ಈಸ್ಟ್ ಯುನೈಟೆಡ್, ಪಂಜಾಬ್, ಇಂಟರ್‌ಕಾಶಿ, ಚೆನ್ನೈಯಿನ್, ಒಡಿಶಾ, ಕೇರಳ ಬ್ಲಾಸ್ಟರ್ಸ್ ಮತ್ತು ಸ್ಪೋರ್ಟಿಂಗ್ ಕ್ಲಬ್ ಡೆಲ್ಲಿ ತಂಡಗಳು ಟೂರ್ನಿಯಲ್ಲಿ ಪಾಲ್ಗೊಂಡಿವೆ. ಪಂದ್ಯಗಳಿಗೆ ಬೆಂಗಳೂರು, ಚೆನ್ನೈ, ನವದೆಹಲಿ, ಕೋಲ್ಕತ್ತ, ಮಡಗಾವ್, ವಾರಾಣಸಿ, ಜೆಮ್‌ಷೆಡ್‌ಪುರ, ಕೊಚ್ಚಿ, ಮುಂಬೈ, ಗುವಾಹಟಿ, ಭುವನೇಶ್ವರ, ಮೊಹಾಲಿ ಆತಿಥ್ಯ ವಹಿಸಿವೆ.

ಟೂರ್ನಿಯ ನಿಯಮದ ಪ್ರಕಾರ ಪ್ರತಿ ತಂಡವು ಗರಿಷ್ಠ ಆರು ಜನ ವಿದೇಶಿ ಆಟಗಾರರನ್ನು ಹೊಂದಲು ಅವಕಾಶವಿದ್ದು, ನಾಲ್ಕು ಜನರನ್ನು ಕಣಕ್ಕಿಳಿಸಬಹುದು. ಟೂರ್ನಿಯಲ್ಲಿ ಅರ್ಜೆಂಟೀನಾ, ಬ್ರೆಜಿಲ್, ಕ್ಯಾಮರೂನ್, ಸ್ಪೇನ್, ಸ್ಕಾಟ್ಲೆಂಡ್, ಪೋರ್ಚುಗಲ್, ನೈಜೀರಿಯಾ ಹೀಗೆ ವಿವಿಧ ದೇಶಗಳು ಆಟಗಾರರು ಪಾಲ್ಗೊಂಡಿದ್ದಾರೆ. ಭಾರತದ ಪರಿಸರದಲ್ಲಿ ವಿದೇಶಿ ಆಟಗಾರರ ಆಟದ ಕೌಶಲಗಳು, ಪಾದರಸದಂಥ ವೇಗ, ಗೋಲು ಗಳಿಸುವ ಚಾಕಚಕ್ಯತೆ ಬಗ್ಗೆ ತಿಳಿದುಕೊಳ್ಳಲು ದೇಶಿಯ ಆಟಗಾರರಿಗೂ ಐಎಸ್‌ಎಲ್ ವೇದಿಕೆ ಒದಗಿಸಿದೆ. ದೇಶದಲ್ಲಿ ಫುಟ್‌ಬಾಲ್ ಹೆಚ್ಚಾಗಿ ಆಡುವ ಕೇರಳ, ಪಶ್ಚಿಮ ಬಂಗಾಳ, ಗೋವಾ, ಮಣಿಪುರ, ಮಿಜೋರಾಂ, ಮೇಘಾಲಯ ರಾಜ್ಯಗಳಲ್ಲಿ ಹೊಸ ಹುಡುಗರು ಬರಲು ಐಎಸ್‌ಎಲ್ ವೇದಿಕೆ ಕೊಟ್ಟಿದೆ.

## ರಾಷ್ಟ್ರೀಯ ತಂಡದ ಮುಂದೆ ಸವಾಲು

ಇಂಡಿಯನ್ ಸೂಪರ್ ಲೀಗ್ ಟೂರ್ನಿ ಪ್ರಸ್ತುತ ಹಲವು ಸವಾಲುಗಳನ್ನೂ ಎದುರಿಸುತ್ತಿದೆ. ರಾಷ್ಟ್ರೀಯ ಫುಟ್‌ಬಾಲ್ ತಂಡವನ್ನು ವಿಶ್ವಮಟ್ಟದಲ್ಲಿ ಪರಿಣಾಮಕಾರಿಯಾಗಿ ಸ್ಪರ್ಧೆಗೆ ಅಣಿಗೊಳಿಸಬೇಕಾದ ಸವಾಲು ಮುಖ್ಯವಾಗಿದೆ.

1950ರ ದಶಕದಲ್ಲಿ ಭಾರತ ಏಷ್ಯಾದಲ್ಲಿ ಅತ್ಯುತ್ತಮ ತಂಡವೆನಿಸಿಕೊಂಡಿತ್ತು. ಸೈಯದ್ ಅಬ್ದುಲ್ ರಹೀಮ್ ಅವರ ಮಾರ್ಗದರ್ಶನದಲ್ಲಿ ಭಾರತ ತಂಡ 1951 ಹಾಗೂ 1962ರ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕ, 1956ರ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಪಡೆದುಕೊಂಡಿತ್ತು. ಏಷ್ಯನ್ ಕಪ್‌ನಲ್ಲಿ ಒಂದು ಸಲ ರನ್ನರ್ಸ್ ಅಪ್, ಅಫ್ರೊ ಏಷ್ಯನ್ ಗೇಮ್ಸ್‌ನಲ್ಲಿ ಬೆಳ್ಳಿ ಪದಕ, ಎಎಫ್‌ಸಿ ಚಾಲೆಂಜ್ ಕಪ್‌ನಲ್ಲಿ ಚಿನ್ನದ ಪದಕ, ಸ್ಯಾಫ್ ಚಾಂಪಿಯನ್‌ಷಿಪ್‌ನಲ್ಲಿ ಎಂಟು ಸಲ ಚಿನ್ನ, ನಾಲ್ಕು ಸಲ ಬೆಳ್ಳಿ ಮತ್ತು ಒಂದು ಸಲ ಕಂಚಿನ ಪದಕವನ್ನು ಭಾರತ ತಂಡ ಪಡೆದುಕೊಂಡಿದೆ. ಸೌತ್ ಏಷ್ಯನ್ ಗೇಮ್ಸ್‌ನಲ್ಲಿ ಮೂರು ಚಿನ್ನ, ಒಂದು ಬೆಳ್ಳಿ, ಎರಡು ಕಂಚು ಹೀಗೆ ಅನೇಕ ಟೂರ್ನಿಗಳಲ್ಲಿ ಪ್ರಶಸ್ತಿ ಗಳಿಸಿಕೊಂಡಿದೆ. ಏಷ್ಯಾ ವಲಯದ ಟೂರ್ನಿಗಳಲ್ಲಿ ಪ್ರಾಬಲ್ಯ ಮೆರೆಯುವ ಭಾರತ ಫುಟ್‌ಬಾಲ್ ತಂಡ ಪ್ರತಿ ಆಟಗಾರನ ಕನಸಾದ ಫಿಫಾ ವಿಶ್ವಕಪ್‌ನಲ್ಲಿ ಪಾಲ್ಗೊಳ್ಳುವ ಅರ್ಹತೆ ಒಮ್ಮೆಯೂ ಪಡೆದುಕೊಂಡಿಲ್ಲ.

ದೇಶಿಯವಾಗಿ ತಂಡವನ್ನು ಬಲಿಷ್ಠಗೊಳಿಸಲು ಐಎಸ್‌ಎಲ್, ಐ ಲೀಗ್, ಡುರಾಂಡ್ ಕಪ್, ಫೆಡರೇಷನ್ ಕಪ್, ನೆಹರೂ ಕಪ್, ಐಎಫ್‌ಎ ಶೀಲ್ಡ್, ಸೂಪರ್ ಕಪ್, ಸಂತೋಷ ಟ್ರೋಫಿ, ಎಐಎಫ್‌ಎಫ್ ಯೂತ್ ಲೀಗ್ ಹೀಗೆ ಅನೇಕ ಟೂರ್ನಿಗಳು ನಡೆಯುತ್ತಲೇ ಇವೆ. ಕರ್ನಾಟಕ ಸೇರಿ ವಿವಿಧ ರಾಜ್ಯಗಳಲ್ಲಿ ಸೂಪರ್ ಲೀಗ್ ಮತ್ತು ವಿವಿಧ ಡಿವಿಷನ್‌ಗಳ ಪಂದ್ಯಗಳು ಆಯೋಜನೆಯಾಗುತ್ತಿದ್ದು ಇವುಗಳಿಂದ ಸಾಕಷ್ಟು ಮಕ್ಕಳಿಗೆ ಪಂದ್ಯಗಳಲ್ಲಿ ಆಡುವ ಅವಕಾಶವೂ ಲಭಿಸುತ್ತದೆ.

ಇಂಥ ಅವಕಾಶಗಳನ್ನೇ ಬಳಸಿಕೊಂಡು ಬೈಚುಂಗ್ ಭುಟಿಯಾ, ಸುನಿಲ್ ಚೆಟ್ರಿ, ಶಬ್ಬೀರ್ ಅಲಿ, ಗುರುಪ್ರೀತ್‌ಸಿಂಗ್ ಸಂಧು, ಸುಬ್ರತೊ ಪಾಲ್, ಐ.ಎಂ. ವಿಜಯನ್, ಸೈಯದ್ ರಹೀಂ ನಭಿ, ನಾರಾಯಣದಾಸ್, ಲೆನ್ನಿ ರಾಡ್ರಿಗಸ್ ಹೀಗೆ ಸಾಕಷ್ಟು ಆಟಗಾರರು ಭಾರತದ ಫುಟ್‌ಬಾಲ್‌ನ ಬೆಳ್ಳಿಕಿರಣವಾಗಿ ಹೊರಹೊಮ್ಮಿದ್ದಾರೆ. ಈಗಿನ ತಲೆಮಾರಿನ ಮಕ್ಕಳಿಗೆ ಸುನಿಲ್ ಚೆಟ್ರಿ ಅವರ ಆಟದ ಬದ್ಧತೆ, ಕ್ರೀಡಾ ಸಾಮರ್ಥ್ಯ ಮಾದರಿಯಂತಿದೆ.



ಭಾರತದ ಫುಟ್‌ಬಾಲ್ ತಾರೆ ಸುನಿಲ್ ಚೆಟ್ರಿ

ಐಎಸ್‌ಎಲ್‌ನಲ್ಲಿ ಬೆಂಗಳೂರು ತಂಡದಲ್ಲಿ ಫಾರ್ವರ್ಡ್ ಆಟಗಾರರಾಗಿದ್ದ ಚೆಟ್ರಿ ಈ ಟೂರ್ನಿಯಲ್ಲಿ ಹೆಚ್ಚು ಗೋಲು ಗಳಿಸಿದ ದಾಖಲೆ ಹೊಂದಿದ್ದಾರೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚು ಗೋಲುಗಳನ್ನು ಗಳಿಸಿದ ಪಟ್ಟಿಯಲ್ಲಿ ಚೆಟ್ರಿ ಹೆಸರು ನಾಲ್ಕನೇ ಸ್ಥಾನದಲ್ಲಿದೆ. ಮೊದಲ ಮೂರು ಸ್ಥಾನಗಳಲ್ಲಿ ಪೋರ್ಚುಗಲ್‌ನ ಕ್ರಿಶ್ಚಿಯಾನೊ ರೊನಾಲ್ಡೊ, ಅರ್ಜೆಂಟೀನಾದ ಲಯೊನಲ್ ಮೆಸ್ಸಿ ಹಾಗೂ ಇರಾನ್‌ನ ಅಲಿ ಡಿಯಾಯಿ ಇದ್ದಾರೆ.

ಇತ್ತೀಚೆಗಿನ ತಲೆಮಾರಿನ ಯುವಕರಿಗೆ ಐಎಸ್‌ಎಲ್ ಟೂರ್ನಿ ಪ್ರತಿಭಾ ಪ್ರದರ್ಶನಕ್ಕೆ ವೇದಿಕೆ ಒದಗಿಸಿದೆ. ರಾಜ್ಯದಲ್ಲಿ ಬೆಂಗಳೂರು ಮಾತ್ರ ಫುಟ್‌ಬಾಲ್ ಕೇಂದ್ರಿತವಾಗಿದೆ. ಬೆಂಗಳೂರಿನಲ್ಲಿ ಇರುವಂತೆ ಹುಬ್ಬಳ್ಳಿಯಲ್ಲಿಯೂ ಉತ್ತಮ ಆಟಗಾರರು ಇದ್ದಾರೆ. ಅವರಿಗೆ ಅವಕಾಶ ಸಿಗದ ಕಾರಣ ಮುಂಬೈ, ಗೋವಾ, ದೆಹಲಿಗೆ ತೆರಳಿ ಅಲ್ಲಿ ತಂಡಗಳಲ್ಲಿ ಗಮನಸೆಳೆಯುತ್ತಿದ್ದಾರೆ. ಆದ್ದರಿಂದ ಫುಟ್‌ಬಾಲ್ ಚೆಂಡಿನ ಬಳ್ಳಿ ದೇಶದ ಉದ್ದಗಲಕ್ಕೂ ಹರಡಬೇಕಿದೆ. ಭಾರತ ಫುಟ್‌ಬಾಲ್ ತಂಡ 'ದ ಬ್ಲ್ಯೂ ಟೈಗರ್ಸ್' ಎನ್ನುವ ಹೆಸರಿನಿಂದ ಕರೆಸಿಕೊಳ್ಳುತ್ತಿದ್ದು, ತನ್ನ ಲೋಪದೋಷಗಳನ್ನು ತಿದ್ದಿಕೊಂಡು ಜಾಗತಿಕ ಫುಟ್‌ಬಾಲ್ ವೇದಿಕೆಯಲ್ಲಿ ತನ್ನ ಹೆಸರಿಗೆ ತಕ್ಕಂತೆ ಹುಲಿಯಂತೆ ಗರ್ಜಿಸುವ ಅಗತ್ಯವಿದೆ. ■



ಐಎಸ್‌ಎಲ್ ಪಂದ್ಯದ ಝಲಕ್